# ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಸಾರ್ವಜನಿಕ ಶಿಕ್ಷಣ ಇಲಾಖೆ, ಉತ್ತರ ವಲಯ-1, ರಾಜಾಜಿನಗರ, ಬೆಂಗಳೂರು-10.

ಸಂಖ್ಯೆ ಸಿ5.ಖಾ.ಶಾ.ಮಾ.ನ.01/2020-21 ದಿನಾಂಕ:29/03/2021

## ಜ್ಞಾಪನಾ

ವಿಷಯ:ನ್ಯೂ ಹಾರ್ಡ್‌ವಿಕ್ ಇಂಡಿಯನ್ ಸ್ಕೂಲ್, ನಂ.52/8.ಕೊಡಿಗೇಹಳ್ಳಿ(ಅಂಚೆ),ಮಾಗಡಿ ಮುಖ್ಯರಸ್ತೆ, ಬೆಂಗಳುರು-91. ಈ ಶಾಲೆಗೆ ಮಾನ್ಯತೆ ನೀಡುವ ಬಗ್ಗೆ.

ಉಲ್ಲೇಖ:-1. ಕಾರ್ಯದರ್ಶಿಗಳ ಪ್ರಸ್ತಾವನೆಯಂತೆ

2. ಭೇಟಿ ವರದಿಯಂತೆ.

*****

**ಪ್ರಸ್ತಾವನೆ:-**.ಕೆ,ಕೆ,ಎಜುಕೇಷನಲ್ ಟ್ರಸ್ಟ್ (ರಿ), ನಂ.52/8. ಕೊಡಿಗೇಹಳ್ಳಿ(ಅಂಚೆ), ಮಾಗಡಿ ಮುಖ್ಯರಸ್ತೆ, ಬೆಂಗಳುರು-91. ಈ ಸಂಸ್ಥೆಯ ವತಿಯಿಂದ ನಡೆಯುತ್ತಿರುವ ನ್ಯೂ ಹಾರ್ಡ್‌ವಿಕ್ ಇಂಡಿಯನ್ ಸ್ಕೂಲ್, ನಂ.52/8. ಕೊಡಿಗೇಹಳ್ಳಿ(ಅಂಚೆ), ಮಾಗಡಿ ಮುಖ್ಯರಸ್ತೆ, ಬೆಂಗಳುರು-91. ಈ ಶಾಲೆಗೆ 1 ರಿಂದ 7ನೇ ತರಗತಿಗೆ ಆಂಗ್ಲ ಮಾಧ್ಯಮದಲ್ಲಿ 2020-21 ರಿಂದ 2024-25 ನೇ ಸಾಲಿನವರೆಗೆ ಮಾನ್ಯತೆ ನವೀಕರಿಸಲು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಉಲ್ಲೇಖ (2)ರ ಭೇಟಿ ವರದಿಯ ಪ್ರಕಾರ ಶಾಲೆಯು ಇಲಾಖಾ ಅನುಮತಿಯಂತೆ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಹೊಂದಿರುವುದರಿಂದ ಶಾಲೆಗೆ 2020-21 ರಿಂದ 2024-25 ನೇ ಸಾಲಿನವರೆಗೆ 1 ರಿಂದ 7ನೇ ತರಗತಿಗೆ ಆಂಗ್ಲ ಮಾಧ್ಯಮದಲ್ಲಿ ಮಾನ್ಯತೆ ನೀಡಬಹುದಾಗಿದೆ ಎಂಬ ಅಭಿಪ್ರಾಯ ನೀಡಿರುತ್ತಾರೆ. ಈ ಮೇಲಿನ ಎಲ್ಲಾ ಅಂಶಗಳನ್ನು ಪರಿಶೀಲಿಸಿ ಶಾಲೆಗೆ 2020-21 ರಿಂದ 2024-25ನೇ ಸಾಲಿನವರೆಗೆ 1 ರಿಂದ 7ನೇ ತರಗತಿಗೆ ಆಂಗ್ಲ ಮಾಧ್ಯಮದ ಮಾನ್ಯತೆ ನವೀಕರಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಆದೇಶ:-** ಪ್ರಸ್ತಾವನೆಯಲ್ಲಿ ಪ್ರಸ್ತಾಪಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕಾರ್ಯದರ್ಶಿಗಳು, ಕೆ,ಕೆ,ಎಜುಕೇಷನಲ್ ಟ್ರಸ್ಟ್ (ರಿ), ನಂ.52/8. ಕೊಡಿಗೇಹಳ್ಳಿ(ಅಂಚೆ), ಮಾಗಡಿ ಮುಖ್ಯರಸ್ತೆ, ಬೆಂಗಳುರು-91. ಈ ಸಂಸ್ಥೆಯ ವತಿಯಿಂದ ನಡೆಯುತ್ತಿರುವ ನ್ಯೂ ಹಾರ್ಡ್‌ವಿಕ್ ಇಂಡಿಯನ್ ಸ್ಕೂಲ್, ನಂ.52/8. ಕೊಡಿಗೇಹಳ್ಳಿ(ಅಂಚೆ), ಮಾಗಡಿ ಮುಖ್ಯರಸ್ತೆ, ಬೆಂಗಳುರು-91.ಈ ಶಾಲೆಗೆ ಸಮಗ್ರ ಶಿಕ್ಷಣ ಕಾಯ್ದೆ ನಿಯಮ 36(6)(ಬಿ) ಪ್ರಕಾರ 2020-21 ರಿಂದ 2024-25ನೇ ಸಾಲಿನವರೆಗೆ 1 ರಿಂದ 7ನೇ ತರಗತಿಯವರೆಗೆ ಆಂಗ್ಲ ಮಾಧ್ಯಮದಲ್ಲಿ ತಲಾ ಒಂದು ವಿಭಾಗಕ್ಕೆ ಶಾಶ್ವತ ಅನುದಾನ ರಹಿತವಾಗಿ ಕೆಳಕಂಡ ಷರತ್ತುಗಳಿಗೊಳಪಟ್ಟು ತಾತ್ಕಾಲಿಕವಾಗಿ ಮಾನ್ಯತೆಯನ್ನು ನವೀಕರಿಸಿದೆ.

ಷರತ್ತುಗಳು:-

1 ಶಿಕ್ಷಕರ ಮತ್ತು ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಪಾಠೋಪಕರಣ,ಪೀಠೋಪಕರಣಗಳು ಸಾಕಷ್ಟು ಸಂಖ್ಯೆಯಲ್ಲಿ ಒದಗಿಸಬೇಕು.

2ಅರ್ಹತೆಯುಳ್ಳ ಶಿಕ್ಷಕರನ್ನು ಮಾತ್ರ ನೇಮಕಾತಿ ಮಾಡಿಕೊಳ್ಳುವುದು.

3.ಶುಲ್ಕ ವಸೂಲಾತಿಗೆ ಇಲಾಖಾ ಅನುಮತಿಯನ್ನು ಪಡೆಯುವುದು.

4 ಸಂಸ್ಥೆಯ ಲೆಕ್ಕಪತ್ರಗಳನ್ನು ನೋಂದಣಾಧಿಕಾರಿಗಳಿಗೆ ಸಲ್ಲಿಸಿ ಅವರಿಂದ ಪಡೆದ ಒಪ್ಪಿಗೆ ಪತ್ರದ ಪ್ರತಿಯನ್ನು ಹಾಜರುಪಡಿಸುವುದು

5.ಶಿಕ್ಷಕರ ಹೆಸರಿನಲ್ಲಿ ಸೇವಾ ವಹಿ ತೆರೆಯಬೇಕು ಹಾಗೂ ಬ್ಯಾಂಕ್ ಮುಖೇನ ಕನಿಷ್ಠ ವೇತನ ವಿತರಣೆ ಮಾಡಬೇಕು.

6.ಮಕ್ಕಳ ದಾಖಲಾತಿಯಲ್ಲಿ ಮೀಸಲಾತಿ ಕಡ್ಡಾಯವಾಗಿ ಪಾಲಿಸುವುದು.

7.ರಾಜ್ಯ ಪಠ್ಯಕ್ರಮ ಹಾಗೂ ಇಲಾಖೆ ನಿಗದಿಗೊಳಿಸಿದ ಪಠ್ಯ ಪುಸ್ತಕಗಳನ್ನು ಉಪಯೋಗಿಸುವುದು.

8.ಶಾಲಾ ಕಟ್ಟಡ ಮತ್ತು ಆವರಣದಲ್ಲಿ ಬೆಂಕಿ ಅಪಘಾತ ಮತ್ತು ಇತರೆ ಅಪಘಾತಗಳಿಂದ ತೊಂದರೆಯಾಗದಂತೆ ಶಾಲಾ ಕಟ್ಟಡದ ಸುರಕ್ಷತೆ ಬಗ್ಗೆ ಮುಂಜಾಗ್ರತೆ ಕ್ರಮ ವಹಿಸತಕ್ಕದ್ದು.

09.ಶಿಕ್ಷಕರರುಗಳ ನೇಮಕಾತಿಯನ್ನು ಶಿಕ್ಷಕ/ವಿದ್ಯಾರ್ಥಿಗಳ ಅನುಪಾತ 1:40:50 ರಂತೆ ಮಾಡಬೇಕು

10.ಶಿಕ್ಷಣ ಕಾಯ್ದೆಯ ಎಲ್ಲಾ ನಿಯಮಗಳನ್ನು, ಸರ್ಕಾರ ಹಾಗೂ ಇಲಾಖೆಯ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.

11.ಶಿಕ್ಷಣ ಕಾಯ್ದೆಯನ್ವಯ ಶಾಲಾ ಸುರಕ್ಷತೆ ಬಗ್ಗೆ ಕ್ರಮ ವಹಿಸುವುದು.

12..ಇಲಾಖೆಗೆ ಅಗತ್ಯವಾದ ಮಾಹಿತಿ ಹಾಗೂ ಅಂಕಿ ಅಂಶಗಳನ್ನು ಸಕಾಲದಲ್ಲಿ ನೀಡತಕ್ಕದ್ದು.

13..ಆರ್.ಟಿ.ಇ. ಅಡಿಯಲ್ಲಿ ನೊಂದಣಿಯನ್ನು ಕಡ್ಡಾಯವಾಗಿ ಪಡೆಯುವುದು.

14.ಶುಲ್ಕದ ವಿವರ ಮತ್ತು ಶಾಲಾ ಅನುಮತಿ ವಿವರವನ್ನು ಶಾಲಾ ಸೂಚನಾ ಫಲಕದಲ್ಲಿ ಕಡ್ಡಾಯವಾಗಿ ಪ್ರಕಟಿಸುವುದು.

15.ಮಕ್ಕಳ ಸುರಕ್ಷತೆ ಬಗ್ಗೆ ಶಾಲೆಯಲ್ಲಿ ಸಿ.ಸಿ.ಟಿ.ವಿ. ಅಳವಡಿಸುವುದು.

16. ಸರ್ಕಾರದ & ಇಲಾಖೆಯ ಆದೇಶದಂತೆ ಎಲ್ಲಾ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳುವುದು ತಪ್ಪಿದಲ್ಲಿ ಈ ಆದೇಶವು ತಂತಾನೆ ರದ್ದಾಗುತ್ತದೆ

(ವಿ.ರಮೇಶ್)
ಕ್ಷೇತ್ರ ಶಿಕ್ಷಣಾಧಿಕಾರಿಗಳು
ಕ್ಷೇತ್ರ ಶಿಕ್ಷಣಾಧಿಕಾರಿಗಳು
ಉತ್ತರ ವಲಯ - 1
2ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು - 560 010

ಇವರಿಗೆ:-

1.ಕಾರ್ಯದರ್ಶಿಗಳು ಕೆ,ಕೆ,ಎಜುಕೇಷನಲ್ ಟ್ರಸ್ಟ್ (ರಿ),ನಂ.52/8. ಕೊಡಿಗೇಹಳ್ಳಿ(ಅಂಚೆ),ಮಾಗಡಿ ಮುಖ್ಯರಸ್ತೆ, ಬೆಂಗಳುರು-91.

2.ಕಛೇರಿ ಪ್ರತಿ.